ಮುಸ್ಲಿಮೇತರ ನಿರಾಶ್ರಿತರಿಗೆ ಕಾಯಂ ಪೌರತ್ವ | ಮಹತ್ವದ ವಿಧೇಯಕಕ್ಕೆ ಸಂಪುಟ ಅಸ್ತು | ರಾಜ್ಯಸಭೆಯಲ್ಲಿ ತಡೆಯೊಡ್ಡಲು ಪ್ರತಿಪಕ್ಷಗಳ ತಂತ್ರ

# ಪೌರತ್ವ ತಿದ್ದುಪಡಿ ವಿಧೇಯಕ ಮಂಡನೆಗೆ ಸಿದ್ಧ



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಂಪುಟ ಸಭೆ ತೀರ್ಮಾನಗಳ ಬಗ್ಗೆ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.



ಪೌರತ್ವ ತಿದ್ದುಪಡಿ ವಿಧೇಯಕಕ್ಕೆ ಸಂಪುಟ ಸಮ್ಮತಿ ನೀಡಿದ ಬಳಿಕ ಅದನ್ನು ವಿರೋಧಿಸಿ ಅಸ್ಸಾಂನಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

**ನವದೆಹಲಿ:** ದೇಶದಲ್ಲಿ ನೆಲೆಸಿರುವ ಮುಸ್ಲಿಮೇತರ ವಲಸಿಗರಿಗೆ ಪೌರತ್ವ ನೀಡುವ ಉದ್ದೇಶದಿಂದ 1955ರ ಪೌರತ್ವ ಕಾಯಿದೆಗೆ ತಿದ್ದುಪಡಿ ತರಲು ಹೊರಟಿರುವ ಕೇಂದ್ರ ಸರಕಾರ ಇನ್ನೆರಡು ದಿನಗಳಲ್ಲಿ ಸಂಸತ್ತಿನ ಎದುರು ಸಂಬಂಧಿತ ವಿಧೇಯಕ ಮಂಡನೆ ಮಾಡಲು ತೀರ್ಮಾನಿಸಿದೆ.

ಬುಧವಾರ ನಡೆದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ವಿಧೇಯಕ ಮಂಡನೆಗೆ ಸಮ್ಮತಿ ಸಿಕ್ಕಿದೆ.

ದೌರ್ಜನ್ಯಕ್ಕೆ ಗುರಿಯಾಗಿ ಬಾಂಗ್ಲಾದೇಶ, ಪಾಕಿಸ್ತಾನ, ಅಫಘಾನಿಸ್ತಾನವನ್ನು ತೊರೆದ ಹಿಂದೂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ ಮತ್ತು ಪಾರ್ಸಿ ಸಮುದಾಯಗಳ ನಿರಾಶ್ರಿತರಿಗೆ ದೇಶದ ಕಾಯಂ ಪೌರತ್ವ ನೀಡುವುದು ತಿದ್ದುಪಡಿ ವಿಧೇಯಕದ ಉದ್ದೇಶವಾಗಿದೆ.

2014ರ ಡಿಸೆಂಬರ್‌ಗೆ ಮೊದಲು ಭಾರತದಲ್ಲಿ ನೆಲೆಸಿದ ವಲಸಿಗರಿಗೆ ಮಾತ್ರ ಪೌರತ್ವ ನೀಡುವುದಾಗಿ ವಿಧೇಯಕದಲ್ಲಿ ಪ್ರಸ್ತಾಪವಾಗಿದೆ.

ಮುಸ್ಲಿಮರನ್ನು ವಿಧೇಯಕದಿಂದ ಹೊರಗಿಟ್ಟಿರುವುದರಿಂದ ವಿಧೇಯಕ ಧರ್ಮದ ಆಧಾರದ ಮೇಲೆ ವಲಸಿಗರನ್ನು ಪೋಷಿಸಲು ಮುಂದಾಗಿದೆ ಎಂದು ಟಿಎಂಸಿ ಸೇರಿದಂತೆ ಅನೇಕ ಪ್ರತಿಪಕ್ಷಗಳು ಸರಕಾರದ ವಿರುದ್ಧ ಹರಿಹಾಯ್ದಿವೆ. ಸಂಸತ್ತಿನ ಸ್ಥಾಯಿ ಸಮಿತಿಯ ಪರಿಶೀಲನೆ ಬಳಿಕ ವಿಧೇಯಕ ಮಂಡಿಸಬೇಕು ಎಂದು ಪ್ರತಿಪಕ್ಷ ನಾಯಕರು ಆಗ್ರಹಿಸಿದ್ದಾರೆ.

**ಮೈತ್ರಿ ಪಕ್ಷಗಳೇ ನಿರ್ಣಾಯಕ:** ಲೋಕಸಭೆಯಲ್ಲಿ ಪೌರತ್ವ ತಿದ್ದುಪಡಿ ವಿಧೇಯಕ ಅನುಮೋದನೆಗೆ ಸರಕಾರಕ್ಕೆ ಯಾವುದೇ ವಿರೋಧ ಎದುರಾಗಲಾರದು. ಆದರೆ ರಾಜ್ಯಸಭೆಯಲ್ಲಿ ವಿಧೇಯಕ ಪಾಸ್ ಆಗಲು ಅಗತ್ಯವಾದ ಬೆಂಬಲ ಬಿಜೆಪಿಗೆ ಸಿಗುವುದು ಅದರ ಎನ್‌ಡಿಎ ಮಿತ್ರಪಕ್ಷಗಳಿಂದ. ಹಾಗಾಗಿ ಜೆಡಿಯು, ಅಕಾಲಿ ದಳ, ಎಐಎಡಿಎಂಕೆ ನಿರ್ಣಾಯಕ ಪಾತ್ರ ವಹಿಸಲಿವೆ. ಎನ್‌ಡಿಎ ಕೂಟದಲ್ಲಿದ್ದಂಥ ಅಸ್ಸಾಂನ ಮಿತ್ರಪಕ್ಷ ಅಸೋಮ್ ಗಣ ಪರಿಷತ್ (ಎಜಿಪಿ) ವಿಧೇಯಕವನ್ನು ವಿರೋಧಿಸಿ ಕಳೆದ ಜನವರಿಯಲ್ಲಿಯೇ ಎನ್‌ಡಿಎ ತೊರೆದಿತ್ತು. ಆದರೆ ಸಂಸತ್ ವಿಸರ್ಜನೆಗೊಂಡ ಬಳಿಕ ಪುನಃ ಮೈತ್ರಿಕೂಟ ಸೇರಿತ್ತು.

## ಖಾಸಗಿ ಮಾಹಿತಿ ರಕ್ಷಣೆ ವಿಧೇಯಕ ಮಂಡನೆಗೆ ಅಸ್ತು

ಪ್ರಜೆಗಳ ಖಾಸಗಿ ಮಾಹಿತಿ ಸೋರಿಕೆ ತಡೆ ಹಾಗೂ ಸೂಕ್ತ ರಕ್ಷಣೆ ಕುರಿತ ಬಹುನಿರೀಕ್ಷಿತ ಖಾಸಗಿ ಮಾಹಿತಿ ಸಂರಕ್ಷಣೆ ವಿಧೇಯಕವನ್ನು ಕೆಲವೇ ದಿನಗಳಲ್ಲಿ ಸಂಸತ್ತಿನಲ್ಲಿ ಮಂಡಿಸಲು ಸಚಿವ ಸಂಪುಟ ತೀರ್ಮಾನಿಸಿದೆ. ಖಾಸಗಿ ಮಾಹಿತಿ ಸಂಗ್ರಹ, ಬಳಕೆ ಕುರಿತು ಅನುಸರಿಸಬೇಕಾದ ನೂತನ ನಿಯಮಾವಳಿ ವಿಧೇಯಕದಲ್ಲಿದ್ದು, ಮಾಹಿತಿ ದುರ್ಬಳಕೆಯಾದರೆ ಕಠಿಣ ಶಿಕ್ಷೆ ವಿಧಿಸಲು ಕೂಡ ವಿಧೇಯಕದಲ್ಲಿ ಅವಕಾಶವಿದೆ. 2018ರ ಖಾಸಗಿ ಮಾಹಿತಿ ಸಂರಕ್ಷಣೆ ವಿಧೇಯಕವನ್ನು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾ. ಬಿ.ಎನ್. ಶ್ರೀಕೃಷ್ಣ ನೇತೃತ್ವದ ತಜ್ಞರ ಸಮಿತಿ ಸಿದ್ಧಪಡಿಸಿದೆ.

## ಸಂಪುಟ ಇತರೆ ತೀರ್ಮಾನಗಳು

- ಭಾರತ್ ಬಾಂಡ್ ವಿನಿಮಯ ವ್ಯಾಪಾರ ಫಂಡ್ ಜಾರಿಗೆ ಸಮ್ಮತಿ
- 44 ಕಾರ್ಮಿಕ ವಿಧೇಯಕಗಳನ್ನು ವಿಲೀನಗೊಳಿಸಿ ರಚಿಸಲಾದ 4 ಸಂಹಿತೆಗಳ ಜಾರಿಗೆ ಒಪ್ಪಿಗೆ
- ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಹಿಂಪಡೆಯುವ ತಿದ್ದುಪಡಿ ವಿಧೇಯಕ ಮಂಡನೆಗೆ ನಿರ್ಧಾರ
- ಮೂರು ಸಂಸ್ಕೃತ ವಿವಿಗಳನ್ನು ಕೇಂದ್ರೀಯ ವಿಶ್ವವಿದ್ಯಾಲಯಗಳಾಗಿ ಪರಿವರ್ತನೆ
- ದಿಲ್ಲಿಯ ಪ್ರಗತಿ ಮೈದಾನದಲ್ಲಿ ಪಂಚತಾರಾ ಹೋಟೆಲ್ ನಿರ್ಮಾಣಕ್ಕೆ ಸಮ್ಮತಿ

## ಲೋಕಸಭೆ ಅಂಗೀಕಾರ ಪಡೆದಿದ್ದ ವಿಧೇಯಕ

ಕಳೆದ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರಕಾರ ಮಂಡಿಸಿದ್ದ ಪೌರತ್ವ ತಿದ್ದುಪಡಿ ವಿಧೇಯಕ 2016ರನ್ನು ಲೋಕಸಭೆ ಅನುಮೋದಿಸಿತ್ತು. ರಾಜ್ಯಸಭೆಯ ಅನುಮೋದನೆಗೆ ಕಾದಿರುವಾಗಲೇ 16ನೇ ಲೋಕಸಭೆ ವಿಸರ್ಜನೆಗೊಂಡಿತ್ತು. ಹಾಗಾಗಿ ಈಗ ಮತ್ತೆ ಕೇಂದ್ರ ಸರಕಾರ ವಿಧೇಯಕವನ್ನು ಮಂಡಿಸುತ್ತಿದೆ.

ಪೌರತ್ವ ತಿದ್ದುಪಡಿ ವಿಧೇಯಕ ಮೂಲಭೂತವಾಗಿ ಅಸಾಂವಿಧಾನಿಕ. ಭಾರತದ ಮೂಲ ಆಶಯವನ್ನೇ ಇದು ಉಲ್ಲಂಘಿಸಿದೆ. ಧರ್ಮವೇ ರಾಷ್ಟ್ರೀಯತೆ ಆಗಬೇಕು ಅಂದುಕೊಂಡವರು ಪಾಕಿಸ್ತಾನ ರಚಿಸಿಕೊಂಡರು. ಆದರೆ ನಾವು ಧರ್ಮ ರಾಷ್ಟ್ರತ್ವದ ಹೊರತಾಗಿದೆ ಎಂದು ನಂಬಿಕೊಂಡು ಬಂದವರು.

**-ಶಶಿ ತರೂರ್** ಕಾಂಗ್ರೆಸ್ ಸಂಸದ

ಆಕ್ರಮ ವಲಸಿಗರು, ನುಸುಳು ಕೋರರ ವಿರುದ್ಧದ ನಿಲುವನ್ನು ಶಿವಸೇನೆ ಸದಾ ಹೊಂದಿದೆ. ಪೌರತ್ವ ತಿದ್ದುಪಡಿ ವಿಧೇಯಕದ ಬಗ್ಗೆ ಇತರ ರಾಜ್ಯಗಳು ಭಿನ್ನ ನಿಲುವು ಹೊಂದಿರಬಹುದು. ಅಸ್ಸಾಂನಲ್ಲಿ ಬಿಜೆಪಿಯ ಮುಖ್ಯಮಂತ್ರಿಯೇ ವಿಧೇಯಕ ವಿರೋಧಿಸುತ್ತಿದ್ದಾರೆ. ಸಂಸತ್ತಿಗೆ ವಿಧೇಯಕ ಬಂದಾಗ ನೋಡೋಣ.

**-ಸಂಜಯ್ ರಾವತ್** ಶಿವಸೇನೆ ಮುಖಂಡ

ಧರ್ಮದ ಆಧಾರದ ಮೇಲೆ ಅಥವಾ ಅದಕ್ಕೆ ಸಂಪರ್ಕ ಕಲ್ಪಿಸಿ ಪೌರತ್ವ ನಿರ್ಧರಿಸಲು ಆಗಲ್ಲ. ಹೀಗಾಗಿ ಉದ್ದೇಶಿತ ವಿಧೇಯಕ ಅಸಾಂವಿಧಾನಿಕ. ಭಾರತದ ಬುನಾದಿಯನ್ನೇ ಈ ವಿಧೇಯಕ ನಾಶ ಮಾಡಲಿದೆ.

**-ಸೀತಾರಾಂ ಯೆಚೂರಿ**

ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ)

# ಚುನಾವಣಾ ಮೀಸಲಾತಿ ಇನ್ನೂ 10 ವರ್ಷ ವಿಸ್ತರಣೆ

## ಸದ್ಯದಲ್ಲೇ ಸಂಸತ್ತಿನಲ್ಲಿ ವಿಧೇಯಕ ಮಂಡನೆ

ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ನೀಡಲಾಗಿರುವ ಮೀಸಲಾತಿಯನ್ನು ಇನ್ನೂ ಹತ್ತು ವರ್ಷಗಳ ಕಾಲ ವಿಸ್ತರಿಸುವ ಮಹತ್ವದ ನಿರ್ಣಯಕ್ಕೆ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಎಸ್ಸಿ/ಎಸ್ಟಿ ಸಮುದಾಯಗಳಿಗೆ ನೀಡಲಾಗಿರುವ ಹಾಲಿ ಮೀಸಲಾತಿ ಅವಧಿಯು 2020ರ ಜನವರಿ 25ಕ್ಕೆ ಅಂತ್ಯಗೊಳ್ಳಬೇಕಿತ್ತು. ಅದೀಗ 2030ರವರೆಗೂ ವಿಸ್ತರಣೆಗೊಂಡಂತಾಗಿದೆ. ಪ್ರಸ್ತುತ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲೇ ಸರಕಾರ ಈ ಸಂಬಂಧ ವಿಧೇಯಕವೊಂದನ್ನು ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆಯಿದೆ.

ಕೇಂದ್ರ ಸಚಿವ ಸಂಪುಟ ನಿರ್ಧಾರ

**ಸಂವಿಧಾನ ತಿದ್ದುಪಡಿ:** ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ಮೀಸಲು ವಿಸ್ತರಣೆಯನ್ನು ಸಂವಿಧಾನದ ತಿದ್ದುಪಡಿ ಮೂಲಕ ನೆರವೇರಿಸಲಾಗುವುದು. ಎಸ್ಸಿ/ಎಸ್ಟಿ ಸಮುದಾಯಕ್ಕೆ ಸರಕಾರಿ ಉದ್ಯೋಗದಲ್ಲಿ ಮೀಸಲು ಕಲ್ಪಿಸುವ ಸಂಬಂಧ ತೀರ್ಮಾನಗಳನ್ನು ಆಯಾ ರಾಜ್ಯ ಸರಕಾರಗಳು ಕೈಗೊಳ್ಳಲಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



**545:** ಲೋಕಸಭೆ ಒಟ್ಟು ಸ್ಥಾನ

**84:** ಹಾಲಿ ಪರಿಶಿಷ್ಟ ಜಾತಿ ಸಂಸದರ ಸಂಖ್ಯೆ

**47:** ಹಾಲಿ ಪರಿಶಿಷ್ಟ ಪಂಗಡದ ಸಂಸದರು

**02:** ಪ್ರಸ್ತುತ ಆಂಗ್ಲೊ-ಇಂಡಿಯನ್ ಮೀಸಲು

**614:** ವಿವಿಧ ರಾಜ್ಯಗಳಲ್ಲಿರುವ ಒಟ್ಟು ಎಸ್ಸಿ ಶಾಸಕರು

**554:** ವಿವಿಧ ರಾಜ್ಯಗಳಲ್ಲಿರುವ ಒಟ್ಟು ಎಸ್ಟಿ ಶಾಸಕರು

## ಆಂಗ್ಲೊ ಇಂಡಿಯನ್ ಮೀಸಲು ರದ್ದು

ಆಂಗ್ಲೊ-ಇಂಡಿಯನ್ ಸಮುದಾಯದ ಸದಸ್ಯರಿಗೆ ನೀಡಲಾಗುತ್ತಿದ್ದ ಮೀಸಲಾತಿಯನ್ನು ತಾತ್ಕಾಲಿಕವಾಗಿ ರದ್ದುಪಡಿಸಲು ಸಂಪುಟ ಸಭೆ ನಿರ್ಣಯ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ ಆಂಗ್ಲೊ-ಇಂಡಿಯನ್ ಸಮುದಾಯವು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಅವರಿಗೆ ಮೀಸಲು ಕಲ್ಪಿಸುವ ಅಗತ್ಯವಿಲ್ಲ. ಒಂದು ವೇಳೆ ಭವಿಷ್ಯದಲ್ಲಿ ಅಗತ್ಯವಾದರೆ, ಮತ್ತೆ ಮೀಸಲು ಕಲ್ಪಿಸುವ ಬಗ್ಗೆ ಪರಿಗಣಿಸಬಹುದು ಎಂಬ ಅಭಿಪ್ರಾಯ ಸರಕಾರದಿಂದ ವ್ಯಕ್ತವಾಗಿದೆ.